ರೂಪಕವೊಂದನ್ನು ಭಿನ್ನ ಆಯಾಮ–ಮನೋಧರ್ಮದಲ್ಲಿ ಶೋಧಿಸುವ ಪ್ರಯತ್ನ 'ಕಾವ್ಯ ಜೂಟಾಟ'. ಆರಿಫ್ ರಾಜಾ, ಕಾವ್ಯಾ ಕಡಮೆ, ಎಚ್.ಆರ್. ರಮೇಶ ಅವರನ್ನು ಹಾದುಬಂದಿರುವ ಈ ಕಾವ್ಯದ ಹಕ್ಕಿ ಈಗ ರಮೇಶ ಆರೋಲಿ ಅವರ ಎದೆಗೂಡು ತಲುಪಿ ಪಟಪಟಿಸುತ್ತಿದೆ. ವಿದ್ಯಾದೇವತೆ ಶಾರದೆಯ ಮೇಲೆ ಆರ್.ಟಿ.ಐ. ಹಾಕಿಸಿದ್ದ ದ್ಯಾಮವ್ವ ಕೇಳುವ ಇಲ್ಲಿನ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು?



ಯಮ್ಮಾ... ಜಗತ್ಗೆ ವಿದ್ಯೆ ಹೇಳೊ ತಾಯೆ
ನನ್ ಕಂದ ಸಾಲ್ಯಾಗ ಹೇಳಿಕ್ವಟ್ಟ ಅಆಇಈ
ತಿದ್ದಿ ತೋರಸ್ಲಿಲ್ಲ ಅಂದಿದ್ರೆ; ಅವ್ನಿಗೆ ಮಧ್ಯಾನದ
ಒಂದೊಪ್ಪತ್ತು ಉಣ್ಣಾಕ ಬಿಡದೆ 'ಮೈಗಳ್ಳ' ಅಂತ
ಬೆರಳು ಜೋಮು ಹಿಡಿಯವರೆಗು ಬಾರಿಸಿ
ಮುಲಾಜಿಲ್ಲದೆ ಸಿಕ್ಷೆ ಕೊಡಬೋದಿತ್ತು
ಹೆಂಗಿದ್ರು ಛಡಿ ಅವ್ರ ಕೈಯಾಗೇ ಇತ್ತು...